The following members are elected to the Board of the College of Agricultural Sciences by the Legislative Assembly:

1. Sri J. P. Sarwesh
2. Sri V. Masiyappa
3. Sri P. Venkatagiriyappa.

THE CITY OF BANGALORE MUNICIPAL CORPORATION (AMENDMENT) BILL, 1964.

(Introduction.)

Sri KONDAJJI BASAPPA (Deputy Minister for Co-operation).—Sir, I beg to introduce the City of Bangalore Municipal Corporation (Amendment) Bill, 1964.

Mr. SPEAKER.—The City of Bangalore Municipal Corporation (Amendment) Bill, 1964 is introduced.

OFFICIAL RESOLUTION.

For the Electricity Board under Electricity Supply Act
Re: **Fixation of maximum amount of loan.**

Sri S. NIJALINGAPPA (Chief Minister).—Sir, I beg to move:

"Whereas the Government of Mysore proposes to fix the maximum amount which the Mysore State Electricity Board may at any time have on loan under sub-section (1) of Section 65 of the Electricity (Supply) Act, 1948 (Central Act 54 of 1948) at twenty crores of rupees;

And whereas under sub-section (3) of Section 65 of the said Act, approval of the State Legislative Assembly is required for fixing a higher maximum amount than ten crores of rupees;

Now, therefore, the State Legislative Assembly hereby accords approval to the proposal of the State Government to fix under sub-section (3) of Section 65 of the said Act, twenty crores of rupees as the maximum amount which the Board may at any time have on loan under sub-section (1) of Section 65 of the said Act."

Mr. SPEAKER.—Resolution moved:

"That whereas the Government of Mysore proposes to fix the maximum amount which the Mysore State Electricity Board

(MR. SPEAKER)

may at any time have on loan under sub-section (1) of Section 65 of the Electricity (Supply) Act, 1948 (Central Act 54 of 1948) at twenty crores of rupees;

And whereas under sub-section (3) of Section 65 of the said Act, approval of the State Legislative Assembly is required for fixing a higher maximum amount than ten crores of rupees;

Now, therefore, the State Legislative Assembly hereby accords approval to the proposal of the State Government to fix under sub-section (3) of Section 65 of the said Act, twenty crores of rupees as the maximum amount which the Board may at any time have on loan under sub-section (1) of Section 65 of the said Act."

† Sri S. NIJALINGAPPA.—This is a simple resolution and it has become necessary in view of the fact that bulk of power is now being produced. Very soon Sharavathy is going into production and there is insistent demand for power both from the rural and urban areas as also from many of the industries that are likely to come up and will come up. The Board has borrowed Rs. 110 lakhs in 1961 and again Rs. 202.96 lakhs in 1961; Rs. 301,41,800 in 1962 and Rs. 306,28,163 in 1963. This is not sufficient and it has become necessary for us to allow the Board to borrow upto Rs. 20 crores. Therefore, this resolution has been introduced and I hope the House will accept it.

† ಶ್ರಿ ಎಸ್. ಗೋಪಾಲ ಗೌಡ (ತೀರ್ಥಹಳ್ಳಿ):—ಈ ನಿರ್ಣಯವನ್ನು ಪ್ರಸ್ತಾಪಿಸುತ್ತಾ, ಇದನ್ನು ನಾನು ವಿರೋಧಿಸುತ್ತೇನೆ. ಕಾರಣವೇನೆಂದರೆ, ಇವರು ವಿದ್ಯುಚ್ಛಕ್ತಿಯ ವಿತರಣೆಯ ಬಗ್ಗೆ ಒಂದು ಬೋರ್ಡನ್ನು ಸರ್ಕಾರದವರು ರಚನೆ ಮಾಡಿದ್ದಾರೆ. ಅದಕ್ಕೆ ಈ ಧಿವಸ ಸುಮಾರು 25 ಕೋಟಿ ರೂಪಾಯಿಗಳ ಆಸ್ತಿಯನ್ನು ವಹಿಸಿ ಕೊಟ್ಟಿದ್ದಾರೆ. ಅದಕ್ಕೆ ಒಬ್ಬರನ್ನ ಛೇರ್ಮನ್ನರನ್ನಾಗಿ ನಾಮಕರಣವನ್ನೂ ಮಾಡಿದ್ದಾರೆ. ರಾಜ್ಯದ ಹಾಗೂ ಕೇಂದ್ರದ ಕಾನೂನಿಗೆ ವಿರೋಧವಾಗಿ ಆ ಬೋರ್ಡಿನಲ್ಲಿ ಈ ಹಿಂದೆ ಸದಸ್ಯರಿದ್ದರು. ಈಗ ಬೋರ್ಡನ್ನು ಹೊಸದಾಗಿ ರಚನೆ ಮಾಡಿದ್ದಾರೆಂದು ಕೇಳುತ್ತೇನೆ. ಈ ಹೊಸ ಸಮಿತಿಯಲ್ಲಿ ಅವರನ್ನು ಕೈಬಿಟ್ಟಿರಬಹುದೆಂದು ಕಾಣುತ್ತಿದೆ. ಆ ರೀತಿ ಮಾಡತಕ್ಕದ್ದು ಕ್ಲಾಜ್ 9ಕ್ಕೆ ವಿರೋಧವಾಗಿರುತ್ತದೆ ಎಂದು ಹಿಂದೆಯೇ ಇದನ್ನು ವಿರೋಧಮಾಡಿದ್ದೆ. ಏಕೆಂದರೆ ಈ ಬೋರ್ಡಿನಲ್ಲಿರತಕ್ಕ ಯಾವೊಬ್ಬ ಸದಸ್ಯರಿಗೂ ಇದರ ವ್ಯವಹಾರದಲ್ಲಿ ಯಾವ ರೀತಿಯ ಒಂದು ಹೆಕ್ಕೂನರಿ ಇಂಟ್ರೆಸ್ಟ್ ಇರಬಾರದ ಎಂದು ಅದರಲ್ಲಿ ಹೇಳಿದೆ. ಇಂಥ ಒಂದು ಕ್ಲಾಜ್ ಎಲ್ಲಾ ಸಂಸ್ಥೆಗಳಿಗೂ ಅನ್ವಯಿಸುತ್ತದೆ. ಆದರೆ ಆಗೇನೋ ಕಾರಣದಿಂದ ಸರ್ಕಾರ ಆ ರೀತಿ ತಪ್ಪನ್ನು ಮಾಡಿತು. ಆದರೆ ಈಗ ಬೋರ್ಡಿನಲ್ಲಿರತಕ್ಕ ಹೊಸ ಸದಸ್ಯರ ಮಾಹಿತಿ ನನಗೆ ಇರುವುದಿಲ್ಲ. ಇದರಲ್ಲಿ ಹೊಸ ಮೈಸೂರಿನ ಕೆಲವು ವ್ಯಕ್ತಿಗಳನ್ನು ತೆಗೆದುಕೊಂಡು ಅವರಿಗೆ ಇದರಲ್ಲಿ ಪ್ರಾತಿನಿಧ್ಯವನ್ನು ಕೊಟ್ಟಿದ್ದಾರೆ. ಬೋರ್ಡಿನವರ ವಿಷಯದಲ್ಲಿ ಅವರ ಕೆಲಸ ಕಾರ್ಯಗಳ ವಿಷಯದಲ್ಲಿ ನಾವು ಯಾವ ರೀತಿಯ ನಿರ್ದೇಶನವನ್ನು ಕೊಡಬೇಕೆಂಬ ಬಗ್ಗೆ ಕಾನೂನಿನಲ್ಲಿ ಎಲ್ಲಿಯೂ ಹೇಳಿಲ್ಲ. ಇದರ ಕಾರ್ಯಕ್ಷೇತ್ರದ ಬಗ್ಗೆ ನನಗೆಕೆಲವು ಅನುಮಾನಗಳು ಬಂದಿವೆ. ಬಹಳ ದೊಡ್ಡ ಜವಾಬ್ದಾರಿ ಕೆಲಸವನ್ನು ಈ ಬೋರ್ಡ್ ನಿರ್ವಹಿಸಬೇಕಾಗಿದೆ. ಮುಖ್ಯವಾಗಿ ನಾವು ಈಗ ಸುಮಾರು 10-12 ಲಕ್ಷ ಕಿಲೋವಾಟಿಗಿಂತ ಹೆಚ್ಚು ವಿದ್ಯುಚ್ಛಕ್ತಿಯನ್ನು ಹೊಸದಾಗಿ ಉತ್ಪಾದನೆ ಮಾಡುವ ಉದ್ಯಮದಲ್ಲಿ ತೊಡಗಿದ್ದೇವೆ. ಇದರ ಕೆಲಸ ವಿತರಣೆಯಾಗಬೇಕು. ಜೊತೆಗೆ ಇದುವರೆಗೂ ಮನೆ ದೀಪಗಳಿಗೆ ಮತ್ತು ಬೀದಿ ದೀಪಗಳಿಗೆ ವಿದ್ಯುಚ್ಛಕ್ತಿ ಕೊಟ್ಟರೆ ನಮ್ಮ ಉದ್ದೇಶ ಮುಗಿಯಿತು ಎಂಬುದಾಗಿ ಹಿಂದೆ ನಾವು ಭಾವಿಸಿದ್ದೆವು. ಲ್ಯಾಟಿನ್, ಪೆಟ್ರೊಮ್ಯಾಕ್ಸ್ ಬದಲು ವಿದ್ಯುಚ್ಛಕ್ತಿ ಹಚ್ಚಿದರೆ ಒಳ್ಳೆಯ ಅನುಕೂಲವೇ ಆಯಿತು. ಆದರೆ ಈಗ ವಿದ್ಯುಚ್ಛಕ್ತಿ ಇದೆಯೆಂದು ಹೇಳುವ ಕಾಲ ಬಂದಿದೆ. ಇನ್ನು

ಬೇರೆ ಉಪಯೋಗವನ್ನು ಇದರಿಂದ ಪಡೆಯಬಹುದೇ ಎನ್ನುವುದನ್ನು ನಾವು ಮೊದಲುಗೊಂಡಲೂ ನೋಡುತ್ತಿರಲಿಲ್ಲ. ಈಗ ವಿದ್ಯುಚ್ಛಕ್ತಿ ಉತ್ಪಾದನೆ ಸಾಧನೆಗಳಲ್ಲಿ ಅತಿ ಮುಖ್ಯವಾದುದು ಮತ್ತು ಬಹಳ ಅಮೂಲ್ಯವಾದುದು ಆಗಿದೆ. ಇದನ್ನು ಹೇಗೆ ಬಳಸಬೇಕೆಂಬ ವ್ಯವಸ್ಥೆ ಮತ್ತು ಕೈಗಾರಿಕೆಗಳಲ್ಲಿ ಯಾವ ರೀತಿಯಲ್ಲಿ ಪ್ರಗತಿಯನ್ನು ಸಾಧಿಸಬೇಕೆನ್ನುವುದು ಮುಖ್ಯ. ವಿದ್ಯುಚ್ಛಕ್ತಿಯನ್ನು ಎಷ್ಟು ಒಳ್ಳೆಯ ರೀತಿಯಲ್ಲಿ ಬಳಸುತ್ತಾರೋ ಅದರ ಮೇಲೆ ಅದರ ಉಪಯೋಗ ಅವಲಂಬಿಸಿದೆ. ಇಂತಹ ಅತಿ ಮುಖ್ಯವಾದ ಕಾರ್ಯವನ್ನು ಈ ರಾಜ್ಯದಲ್ಲಿ ನಿರ್ವಹಣೆ ಮಾಡುವುದಕ್ಕಾಗಿ ನಿರಬಿಂಧಪಟ್ಟ ಇರುವೆಯ ಮೇಲೆ ಇಂತಹ ಒಂದು ದೊಡ್ಡ ಜಪಾಬ್ದಾರಿಯನ್ನು ಹೊರಿಸಿ ಈ ಮಂಡಲಯನ್ನು ನಾವು ಸೃಷ್ಟಿಮಾಡಿದ್ದೇವೆ, ರಚನೆಮಾಡಿದ್ದೇವೆ. ಅದಕ್ಕಾಗಿಯೇ ಕಾನೂನುಗಳನ್ನು ಮಾಡಿದ್ದೇವೆ. ಅನೇಕ ಅನುದಾನಗಳನ್ನೂ ಸಹ ಕೊಟ್ಟಿದ್ದೇವೆ. ಅವರಿಗೆ ಈಗಾಗಲೇ ಕೊಟ್ಟಿರುವ 10 ಕೋಟಿ ರೂಪಾಯಿಗಳ ಪರಮಾವಧಿ ಮಿತಿ ಸಾಲದು, 20 ಕೋಟಿ ರೂಪಾಯಿಗಳವರೆಗೂ ಅವರು ಹಣ ಪಟ್ಟುಕೊಳ್ಳುವುದಕ್ಕೆ ಅವಕಾಶಕೊಡಬೇಕೆಂಬುದಾಗಿ ಮಾನ್ಯ ಮುಖ್ಯಮಂತ್ರಿಗಳು ಈ ಸಭೆಯ ಒಪ್ಪಿಗೆಯನ್ನು ಕೇಳುತ್ತಿದ್ದಾರೆ. ಇವತ್ತು ಅವರಿಗೆ 10 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅದ್ದರಿಂದ ಇನ್ನು 20 ಕೋಟಿ ರೂಪಾಯಿಗಳವರೆಗೆ ಕೊಡುವುದು ಹೆಚ್ಚಲ್ಲ. ಅದು ಬಹಳ ದೊಡ್ಡ ದೊಡ್ಡ ಕೆಲಸಗಳನ್ನು ಮಾಡುತ್ತಿದೆ, ಅನೇಕ ಕೋಟಿ ರೂಪಾಯಿಗಳ ಸಾಮಾನುಗಳನ್ನು ಹೊರಗಡೆಯಿಂದ ತರಿಸುತ್ತಿದೆ. ಇಲ್ಲಿ ಚೆನ್ನಾಗಿ ಕೆಲಸವನ್ನೂ ಸಹ ಮಾಡುತ್ತಿದ್ದಾರೆ ಎಂದು ಅವರು ಹೇಳುತ್ತಾರೆ. ಆದರೆ ಇವತ್ತಿನ ದಿವಸ ಅವರ ಕಾರ್ಯದಕ್ಷತೆಯ ಕಾರ್ಯಕ್ರಮವನ್ನು ಹಂಕಡೆಕೊಂಡು ಕೆಲಸ ಮಾಡುವ ವಿಧಾನವನ್ನು ನೋಡಿದರೆ ನನಗೇಕೋ ಅವರು ಕೆಲಸಮಾಡುವ ರೀತಿ ನೀತಿಯ ಬಗ್ಗೆ ತುಂಬಾ ಅನುಮಾನ ಬರುತ್ತದೆ. ಏನೆಂದರೆ ನೀರಾವರಿ ಪಂಪುಸೆಟ್ಟುಗಳ ವಿತರಣೆ ಮತ್ತು ಅದಕ್ಕೆ ವಿದ್ಯುಚ್ಛಕ್ತಿಯನ್ನು ಒದಗಿಸುವ ಕೆಲಸದಲ್ಲಂತೂ ಈ ಬೋರ್ಡು ಎಷ್ಟರಮಟ್ಟಿಗೆ ತೃಪ್ತಿಕರವಾಗಿ ಕೆಲಸ ಮಾಡಿದೆ ಎನ್ನುವುದನ್ನು ಮಾನ್ಯ ಮುಖ್ಯಮಂತ್ರಿಗಳು ಸ್ವತಃ ಖುದ್ದಾಗಿ ಪರಿಶೀಲನೆ ಮಾಡುವುದು ಒಳ್ಳೆಯದು. ಏನೋ ಕೆಲವು ಸಂದರ್ಭಗಳಲ್ಲಿ ಪ್ರಶ್ನೋತ್ತರ ವೇಳೆಯಲ್ಲಿ ಇಲ್ಲ ಉಪಪ್ರಶ್ನೆಗಳನ್ನು ಹಾಕಿದರೆ ಅದಕ್ಕೆ ಸಂಬಂಧಪಟ್ಟ ಮಂತ್ರಿಗಳು ಯಾವ ರೀತಿಯಲ್ಲಿ ಉತ್ತರ ಕೊಡುತ್ತಾರೆಂದರೆ, ನೋಡಬೇಕು, ಇನ್ನೊಂದು ಪ್ರಶ್ನೆ ಹಾಕಿ ಎಂದು ಹೇಳುತ್ತಾರೆ. ಒಂದು ಸಾರಿ ಪ್ರಶ್ನೆ ಕೇಳಿದ ಮೇಲೆ ಮತ್ತೆ ಪುನಃ ಅದನ್ನೇ ಪರ್‌ನ್ಯೂ ಮಾಡುವುದೆಂದರೆ ನಮಗೆ ಎಷ್ಟೋ ಸಾರಿ ಅಸಾಧ್ಯವಾದ ಕೆಲಸವಾಗುತ್ತದೆ. ನಮಗೆ ಆ ಪ್ರಶ್ನೆ ಅಲ್ಲಿಗೇ ಸಾಕು ಎಂದನಿಸುತ್ತದೆ. ಹೀಗಿರುವಾಗ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವ ಬಗ್ಗೆ ಹಳೆಯಕಾಲದ ಗ್ರಾಮೀಣ ಪದ್ಧತಿಯನ್ನು ಅನುಸರಿಸುತ್ತಾ, ಒಂದೊಂದು ತಾಲ್ಲೂಕಿನಿಂದ 60 ಅರ್ಜಿಗಳು ಬಂದರೆ ಕೇವಲ 15-20 ಅರ್ಜಿಗಳನ್ನು ಎರಡು ವರ್ಷಗಳಲ್ಲಿ ಪೂರ್ತಿ ಉತ್ತರ ಕೊಡುವುದಕ್ಕೆ ಇವರಿಗೆ ಸಾಧ್ಯವಾಗಲಲ್ಲ. ಕೆಲವು ಕಡೆಗಳಲ್ಲಿ ಗ್ರಾಮಾಂತರ ಪ್ರದೇಶಗಳಿಗೆ ಮಂತ್ರಿಗಳು ಭೇಟಿ ಕೊಟ್ಟಾಗ ಜನರ ಪ್ರೀತಿ, ವಿಶ್ವಾಸ, ಓಟು—ಇವುಗಳನ್ನು ಗಳಿಸುವ ಸಲುವಾಗಿ ಬಹಳ ಕಡೆಗಳಲ್ಲಿ ಹೋಗಿ ನಿಮ್ಮ ಹಳ್ಳಿಗೆ ವಿದ್ಯುಚ್ಛಕ್ತಿಯನ್ನು ಕೂಡಲೇ ಕೊಡುತ್ತೇವೆ, ಮುಂದಿನ ಪರ್ಷ ಉಳಿದವರೆಲ್ಲರಿಗೂ ಕೊಡುತ್ತೇವೆಂದು ಭಾಷಣಗಳನ್ನು ಮಾಡುವುದು—ಹೀಗೆ ಒಂದು ಸದಾವಕಾಶವನ್ನು ಅಲ್ಲ ಹೇಳುತ್ತಾರೆ. ಅದರೆ ನನ್ನ ಕ್ಷೇತ್ರದಲ್ಲಿ ಎಡೂರು ಎಂಬ ಊರು ಇದೆ. ಅಲ್ಲಿಂದ ಒಂದು ಫೋನ್ ಲೈನ್ ಹೋಗಿದೆ. ಶಿವಮೊಗ್ಗಾದಲ್ಲಿ ತರಕಾರಿ ಪ್ರಾಜೆಕ್ಟ್ ಆಗುವ ಕಡೆ ಇರುವ ಗ್ರಾಮ ಅದು. ಆಲ್ಲಿ ತರತಿಗೆಗಳನ್ನು ಹಾಕುವುದಕ್ಕಾಗಿ ಗ್ರಾಮಪಂಚಾಯತಿಯವರು ಹಣಿಕೊಟ್ಟು, ಆದ ಮೇಲೆ ನನ್ನನ್ನೂ ಸಹ ಕರೆದುಕೊಂಡು ಹೋಗಿ ಎಲ್ಲ ವಿಚಾರಗಳನ್ನು ಹೇಳಿದರು. ಆಫೀಸಿನಲ್ಲಿ ವಿಚಾರ ಮಾಡಿದಾಗ ಅದಕ್ಕೆ ಸಂಬಂಧಪಟ್ಟ ಕಾಗದವನ್ನು ಕಳೆದು ಹಾಕಿದ್ದರೆಂಬ ಪದಂತಿ ಬಂತು. ಇಲ್ಲಿಂದ ಫೋನ್ ಮಾಡಿದರೆ ಇನ್ನೊಂದು ಅರ್ಜಿ ಕೊಡಿ, ಗ್ರಾಮಪಂಚಾಯತಿಯವರ ಫೈರ್‌ನಲ್ಲಲ್ಲ. ಇನ್ನು ನೀರಾವರಿ ಯೋಜನೆಗಳು ಇಲ್ಲದ ಕಡೆಗಳಲ್ಲಿ ಪಂಪುಸೆಟ್ಟುಗಳನ್ನು ಹಾಕುವ ಮೂಲಕ ಆ ಸೌಕರ್ಯ ಕೊಡಿ ಎಂದು ಕೇಳಿದರೆ ನಮ್ಮಲ್ಲಿ ಲಿಕ್ಕಗಳನ್ನು ಕೊಡುವುದು ಜಾಸ್ತಿಯಾಗಿದೆ. ಇಪರಿಗೆ ಎಲ್ಲಾ ಗ್ರಾಮಗಳಲ್ಲಿಯೂ ದೀಪ ಕೊಡುವುದಿಕ್ಕಾಗುವುದಿಲ್ಲ. ಕಾರಣ ಕೇಳಿದರೆ ಕಂಬಗಳು ಬಂದಿಲ್ಲ, ತಂತಿಗಳಿಲ್ಲ, ಕಾಪರ್‌ವೈರ್ ಬಂದಿಲ್ಲವೆಂದು ಹೇಳುತ್ತಾರೆ. ಈ ರೀತಿಯಲ್ಲಿ ಈ ಸರ್ಕಾರದ ಪ್ರಚಾರವಾಗಿದೆ. ಸಾಮಾನ್ಯವಾಗಿ ಕೇವಲ 10 ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡುವುದಕ್ಕೆ ಮೂರು ವರ್ಷಗಳಿಂದಲೂ ಇವರು ಪ್ರಯತ್ನ ಮಾಡುತ್ತಿರುವಾಗ ಇನ್ನು ದೇಶದಲ್ಲಿರತಕ್ಕ ನೂರಾರು ಗ್ರಾಮಗಳಿಗೆಲ್ಲಾ ವಿದ್ಯುಚ್ಛಕ್ತಿ ಬರಬೇಕಾದರೆ ಇನ್ನೆಷ್ಟು ಕಾಲಬೇಕಾಗುತ್ತದೋ ನನಗೆ ಗೊತ್ತಿಲ್ಲ. ಇನ್ನು ಮಾನ್ಯ ಮುಖ್ಯಮಂತ್ರಿಗಳು ಬಂದಿರತಕ್ಕ ಬಿಜಾಪುರ ಜಿಲ್ಲೆಯ ಮತ್ತು ಪಕ್ಕದಲ್ಲಿರತಕ್ಕ ಗುಲ್ಬರ್ಗ ಹಾಗೂ ಬೀದರ ಜಿಲ್ಲೆಗಳಲ್ಲಿರತಕ್ಕ ಗ್ರಾಮಗಳು ವಿದ್ಯುಚ್ಛಕ್ತಿಯನ್ನು ಒದಗಿಸುವ ವಿಚಾರವನ್ನು ಪರಿಶೀಲನೆ ಮಾಡಿದ್ದಾರೋ ಇಲ್ಲವೋ ಗೊತ್ತಿಲ್ಲ. ನಿಜವಾಗಿ ಇದನ್ನು ನೋಡುವವರಿಗೆ ಕಣ್ಣೀರು ಬರುವುದು ಸ್ವಾಭಾವಿಕ. ಇವರು

(ಶ್ರೀ ಎಸ್. ಗೋಪಾಲ ಗೌಡ)

ಅಲ್ಲಲ್ಲಿ ಹೇಳಿಕೆ ಕೊಡುವ ರೀತಿ ನೋಡಿದರೆ ಬ್ಯೂರೊಕ್ರಟಿಕ್ಕಾಗಿರುತ್ತದೆ. ಆದರೆ ಅವರು ಮಾಡ ತಕ್ಕ ಭಾಷಣಗಳಿಂದ ಪರಿಣಾಮವೇನೂ ಆಗುತ್ತಿಲ್ಲ. ಕ್ಷಾಮದ ವಿಷಯವಾಗಿ ಮಾತನಾಡುತ್ತಾ ಬಡ್ಜೆಟ್ಟಿನಲ್ಲಿ ಇದಕ್ಕೆ ಸಂಬಂಧಪಟ್ಟ ವರ್ಕ್ಸ್‌ಗೆ ಹಣವನ್ನು ಒದಗಿಸದೇ ಇದ್ದರೂ ಕೆಲವು ಸಂದರ್ಭ ಗಳಲ್ಲಿ ಅವನ್ನು ಕಾರ್ಯಗತ ಮಾಡುತ್ತೇವೆಂದು ಹೇಳಿದರು. ಆದರೆ ಸುಮಾರು 6 ತಿಂಗಳುಗಳಿಂದಲೂ ಪೆಂಡಿಂಗ್‌ನಲ್ಲಿರತಕ್ಕ ಈ ಪಂಪುಸೆಟ್ಟುಗಳನ್ನು ಒದಗಿಸುವ ಕೆಲಸವಂತೂ ಇನ್ನೂ ಆಗಲಿಲ್ಲ. ಇನ್ನು ಬೆದರೆ, ಶಿವಮೊಗ್ಗಾ ಅಥವಾ ಚಿತ್ರದುರ್ಗ ಜಿಲ್ಲೆಗಳ ಬಗ್ಗೆ ಈ ವಿಚಾರ ಏನಾಗಿದೆ ಎಂಬುದಾಗಿ ಉತ್ತರ ಕೇಳಿದರೆ ಅದು ಮಾನ್ಯ ಸದಸ್ಯರಿಗೆ ಗೊತ್ತಾಗಿದೆ. ಆ ವಿಷಯ ನಮಗೆ ಘನದರ್ಟಾಗಿದೆ ಎಂದು ಹೇಳುತ್ತಾರೆ. ಈ ಇರಾಖೆ ಬೇಶಕ್ಕೆ ಒಂದು ದೊಡ್ಡ ಬೆಳಕನ್ನು ಹಂಚುವ ಇರಾಖೆ ಯಾದರೂ ಈ ಇರಾಖೆಯ ಬೋರ್ಡಿನ ಕಾರ್ಯನೀತಿಯ ಕ್ರಮ ಬಹಳವಾಗಿ ಘೋರ ಅಂಧಕಾರದಲ್ಲಿದೆ ಎಂಬುದಾಗಿ ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ನಾವೇನಾದರೂ ಟೀಕೆಗಳನ್ನು ಮಾಡಿದರೆ ಮಾನ್ಯ ಅಧ್ಯಕ್ಷರು ಬೇಜಾರುಪಡಬಹುದು, ಅದಕ್ಕೋಸ್ಕರ ನಮ್ಮನ್ನು ಅವರು ಸ್ಪೇರ್ ಮಾಡುವುದಿಲ್ಲ. ಅನೇಕ ಸಂದರ್ಭಗಳಲ್ಲಿ ಅಧಿಕಾರಿಗಳಿಗೆ ಅರ್ಜಿಗಳನ್ನು ಶಿಫಾರಸ್ಸುಮಾಡಿ ಕೆಲಸ ಮಾಡಿಸುವುದು ಎಷ್ಟರಮಟ್ಟಿಗೆ ಸಾಧುವೆಂಬುದನ್ನು ತಾವು ವಿಚಾರ ಮಾಡಬೇಕು. ಬೋರ್ಡ್ ಎಂದ ಮಾತ್ರಕ್ಕೇ ಅದಕ್ಕೆ ನಾವು ಸರ್ವತಂತ್ರ ಸ್ವತಂತ್ರವೇನೂ ಕೊಟ್ಟಿಲ್ಲ. ಸರ್ಕಾರ ಹಾಕತಕ್ಕ ಕಾರ್ಯಕ್ರಮಗಳಿಗನುಗುಣವಾಗಿ ಮತ್ತು ರಾಜ್ಯದ ಜನರ ಅಪೇಕ್ಷೆಗನುಗುಣವಾಗಿ ಈ ಬೋರ್ಡ್ ದಕ್ಷತೆಯಿಂದ ಹಾಗೂ ಶೀಘ್ರವಾಗಿ ಕೆಲಸಗಳನ್ನು ಮಾಡುವಂತಹ ವ್ಯವಸ್ಥೆಯನ್ನು ರೂಪಿಸಿ ಕೊಳ್ಳಬೇಕು. ಈ ಒಂದು ಯಂತ್ರದಲ್ಲಿ ಚಾಲನೆ ಉಂಟಾಗಬೇಕು. ದೇಶದಲ್ಲಿ ವಿದ್ಯುಚ್ಛಕ್ತಿ ಬಳಕೆಯ ಮೇಲೆ ಎಷ್ಟರಮಟ್ಟಿಗೆ ಆಹಾರೋತ್ಪಾದನೆ ಮತ್ತು ಕೈಗಾರಿಕೋತ್ಪಾದನೆ ಅವಲಂಬಿ ಸಿದೆ ಎಂಬುದನ್ನು ಈ ಬೋರ್ಡ್ ಮನಗಾಣಬೇಕು.

ಹಿಂದೆ ಹತ್ತು ಕೋಟಿ ರೂಪಾಯಿಗಳನ್ನು ವಿದ್ಯುಚ್ಛಕ್ತಿ ಬೋರ್ಡಿನವರು ಸಾಲವಾಗಿ ಪಡೆದು ಯಾವ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳಬೇಕೆಂದು ಈ ಸಭೆಯವರು ಅನುಮತಿಯನ್ನು ಕೊಟ್ಟಿದ್ದರೋ ಅದನ್ನು ಸಾರ್ಥಕವಾದ ರೀತಿಯಲ್ಲಿ ಬಳಸಿಕೊಳ್ಳದೆ ಇರತಕ್ಕ ಆ ವಿದ್ಯುಚ್ಛಕ್ತಿ ಮಂಡಲಿಗೆ ಮತ್ತೆ 20 ಕೋಟಿ ರೂಪಾಯಿಗಳವರೆಗೆ ಸಾಲವನ್ನೂ ಪಡೆದುಕೊಳ್ಳತಕ್ಕಂಥ ಒಂದು ಅಧಿಕಾರವನ್ನು ಕೊಡು ವುದರಲ್ಲಿ ಏನು ಔಚಿತ್ಯ ಇದೆ ? ಅವರು ಯಾವ ಉದ್ದೇಶವನ್ನು ಸಾರ್ಥಕ ಪಡಿಸುತ್ತಾರೆ ಎಂಬುದು ನನಗೆ ಗೊತ್ತಾಗುವುದಿಲ್ಲ. ಸಿಮೆಂಟ್ ಫ್ಯಾಕ್ಟರಿಗಳನ್ನು ತಯಾರು ಮಾಡುವುದಕ್ಕೆ ಕೊಟ್ಟಿರುವ ವಿಷಯದಲ್ಲಿ ಒಬ್ಬರಿಗೊಬ್ಬರಿಗೆ ಹೊಂದಾಣಿಕೆ ಇಲ್ಲದೆ ಇರುವುದು, ಇದನ್ನೆಲ್ಲಾ ನೋಡಿದರೆ ಅಲ್ಲಿ ಏನೋ ಒಂದು ದೊಡ್ಡ ಕೆಲಸ ನಡೆದಿದೆ ಎಂದು ಗೊತ್ತಾಗುತ್ತದೆ. ಕಂಟ್ರಾಕ್ಟರ ವ್ಯವಹಾರದಲ್ಲಿ ಕಾನೂನು ನಿಯಮ ಯಾವುದೂ ಇಲ್ಲದೆ ನಡೆಯುತ್ತಿರುವುದು ಇವುಗಳನ್ನೆಲ್ಲಾ ಪರಿಶೀಲನೆ ಮಾಡಿದ್ದಾಗಿದೆ. ಆಡಿಟ್ ವರದಿಯಲ್ಲಿ ಇವುಗಳೆಲ್ಲವೂ ಬಂದಿವೆ. ಅವುಗಳಿಗೆ ಸಮಾಧಾನಕರವಾದ, ತೃಪ್ತಿಕರವಾದ ಉತ್ತರವನ್ನು ಮಂತ್ರಿಗಳಾಗಲೀ ಬೋರ್ಡಿನವರಾಗಲೀ ಕೊಡದೆ ಇರುವಾಗ ಮತ್ತೆ 10 ಕ್ರೋಟಿ ರೂಪ ಯಿಗಳ ಸಾಲವನ್ನು ಮಾಡುವುದಕ್ಕೆ ಅವಕಾಶವನ್ನು ಕೊಡಿ ಎಂದು ಕೇಳು ತ್ತಿದ್ದಾರೆ. ನಿಮಗೆ ಅದರ ಜವಾಬ್ದಾರಿಯೇನೂ ಇಲ್ಲ, ಅದಕ್ಕೆ ನಿಮ್ಮ ಒಪ್ಪಿಗೆಯನ್ನ ಕೊಡಿ ಎಂದು ತಾವು ಹೇಳಬಹುದು. ಈ ರೋಸ್ಸ್ ವಿಷಯದಲ್ಲಿ ಪಬ್ಲಿಕ್ ಅಕೌಂಟ್ಸ್ ಕಮಿಟಿಯ ವರದಿಯಲ್ಲಿ ಏನು ಬರೆದಿದ್ದಾರೆಂದರೆ, ಈ ರೋಸ್ಸ್ ವಿಷಯದಲ್ಲಿ ಪುನರ್‌ವಿಮರ್ಶೆ ಮಾಡಬೇಕು ಎಂದು ಫೈನಾನ್ಸ್ ಕಮಿಷನ್ ಮುಂದೆ ಇವರು ಹೇಳಿದಾಗ ಅವರು ಏನು ನಲಹೆಯನ್ನು ಮಾಡಿದ್ದಾರೆ ಎಂದರೆ ಸಾಲ ವನ್ನು ತೆಗೆದುಕೊಳ್ಳುವುದಾದರೆ, ಅದರ ತೀರ್ಮಿಕೆ ಹೇಗೆ ವಿತರಣೆ ಹೇಗೆ ಎಂಬುದನ್ನು ಕೂಡ ವಿಚಾರಮಾಡಿ ಎಂದು ಹೇಳಿದ್ದಾರೆ. ಈಗ ಅವರಿಗೆ ಯಾವುದೋ ಒಂದು ಬ್ಯಾಂಕು ಸಾಲವನ್ನು ಕೊಡುತ್ತದೆ, ಆ ಹಣಕ್ಕೆ ಯಾರು ಗ್ಯಾರಂಟಿಯನ್ನು ಕೊಡುತ್ತಾರೆಯೋ ಅವರು ನಾಳೆ ಆ ಹಣವನ್ನು ದುರಪಯೋಗಮಾಡಿ, ಅಪವ್ಯಯಮಾಡಿ ಇಕ್ಕಟ್ಟಾಲ್ಲಿಸಿ ತೆಗೆದುಕೊಂಡರೆ ಅದಕ್ಕೆ ಹೊಣೆಯಾರು ? ಈ ದೃಷ್ಟಿಯಿಂದ ನಾನು ಹೇಳುವುದೇನೆಂದರೆ ಮೊದಲು ಈ ಬೋರ್ಡು ಈಗ ಯಾವ ಯಾವ ಕಾರ್ಯಗಳನ್ನು ಪ್ರಾರಂಭ ಮಾಡಿದೆ. ಮತ್ತು ಇದರ ಯೋಜನೆಗಳಿಗೆ ಈಗ ಎಷ್ಟು ಇಂಡೆಂಟ್ ಮಾಡಿದ್ದಾರೆ. ಈಗ ಯಾವ ಯಾವ ಸಾಮಾನುಗಳು ಬಂದಿವೆ, ಇನ್ನೂ ಏನೇನು ಬರುತ್ತವೆ, ಯಾವ ದೇಶದಲ್ಲಿ ಏನು ಅಗ್ರೀಮೆಂಟ್ ಮಾಡಿಕೊಂಡಿದ್ದಾರೆ ಇತ್ಯಾದಿಗಳನ್ನೆಲ್ಲಾ ನಾವು ವಿಚಾರಮಾಡಬೇಕು. ಈಗ ಯಾವುದೋ ಒಂದು ಖಾಸಗೀ ಬ್ಯಾಂಕಿನಲ್ಲಿ ಬೋರ್ಡಿನವರು ಹಣವನ್ನು ಡಿಪಾಜಿಟ್ ಇಟ್ಟಿ ದ್ದರೆ. ಅದನ್ನೇ ಮುಂದುವರಿಸಿ ಪುನಃ 10 ಕೋಟಿ ರೂಪಾಯಿಗಳನ್ನು ಅದರಲ್ಲಿ ಭರ್ತಿ ಮಾಡುವುದಕ್ಕೆ ಅವಕಾಶವನ್ನು ಕೊಡುವುದಾದರೆ, 9 ಕೋಟಿ, 10 ಕೋಟಿ ರೂಪಾಯಿಗಳನ್ನು

6-7 ವರ್ಷ ಪ್ರೈವೇಟ್ ಬ್ಯಾಂಕಿನಲ್ಲಿ ಇಟ್ಟುಕೊಳ್ಳುವುದಾದರೆ ಅವರು ಕೋಟ್ಯಾಧೀಶ್ವರರಾಗುತ್ತಾರೆ. ಈಗ ವಿದ್ಯುಚ್ಛಕ್ತಿ ಬೋರ್ಡಿನವರು ಸಾಲವನ್ನು ಪಡೆದುಕೊಳ್ಳಬಹುದಾದ ಹಣದ ಪರಮಾವಧಿ ಮೊತ್ತವನ್ನು 20 ಕೋಟಿ ರೂಪಾಯಿಗಳಿಗೆ ಏರಿಸುವುದರ ಬಗ್ಗೆ ನಮ್ಮ ಅನುಮತಿಯನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಮುಂಖ್ಯ ಮಂತ್ರಿಗಳು ಬೋರ್ಡಿನ ಪರವಾಗಿ ನೂಕ್ತವಾದ ಒಂದು ವರದಿಯನ್ನು ಕೊಡಿಸಿ ಅವರ ವ್ಯವಹಾರಗಳೆಲ್ಲಾ ಯೋಗ್ಯ ರೀತಿಯಲ್ಲಿ ನಡೆಯುತ್ತಿವೆ ಎಂದು ಮನಗಂಡಾಗ ಮಾತ್ರ ಈ ಬೇಡಿಕೆಗೆ ಅನ್ನು ಎಂದು ಹೇಳಬಹುದೇ ಹೊರತು ಇಲ್ಲದಿದ್ದರೆ ಸಾಧ್ಯವಿಲ್ಲ ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

†ಶ್ರೀ ಸಿದ್ದಯ್ಯ ಕಾಶೀಮಠ (ಶಿರಹಟ್ಟಿ).—ಮಾನ್ಯ ಅಧ್ಯಕ್ಷರೇ ಶರಾವತಿ ವ್ಯಾಲಿಯಲ್ಲಿ ಉತ್ಪಾದನೆಯಾದಂತಹ ವಿದ್ಯುಚ್ಛಕ್ತಿಯನ್ನು ಬಳಸುವುದಕ್ಕೆ ಬೇಕಾದಂತಹ ಉಪಕರಣಗಳನ್ನು ಕೊಳ್ಳುವುದಕ್ಕೂ ಮತ್ತು ಕೆಲವು ಇತರೇ ಸಾಮಗ್ರಿಗಳನ್ನು ಪರದೇಶದಿಂದ ತರುವುದಕ್ಕೂ ವಿದ್ಯುಚ್ಛಕ್ತಿ ಮಂಡಲಯವರಿಗೆ ಹೆಚ್ಚಿನ ಸಾಲಬೇಕು ಎಂದು ಸರ್ಕಾರದವರು ಒಂದು ನಿರ್ಣಯವನ್ನು ತಂದಿದ್ದಾರೆ. ಈ ನಿರ್ಣಯಲ್ಲಿ ವಿದ್ಯುಚ್ಛಕ್ತಿಮಂಡಲಿಯವರು ಯಾವುದೇ ಕಾಲದಲ್ಲಾಗಲೀ ಸಾಲವಾಗಿ ಪಡೆದುಕೊಳ್ಳಬಹುದಾದ ಹಣದ ಪರಮಾವಧಿ ಮೊತ್ತವನ್ನು 20 ಕೋಟಿ ರೂಪಾಯಿಗಳವರೆಗೆ ಗೊತ್ತು ಮಾಡಬೇಕೆಂದು ಹೇಳಿದ್ದಾರೆ. ನಾನು ಈ ನಿರ್ಣಯವನ್ನು ಬೆಂಬಲಿಸುತ್ತಾ ಒಂದೆರಡು ವಿಷಯಗಳನ್ನು ಹೇಳ ಬಯಸುತ್ತೇನೆ. ವಿದ್ಯುಚ್ಛಕ್ತಿ ಬೋರ್ಡಿನವರು ಕೊಂಡುಕೊಂಡಿರತಕ್ಕ ಕಬ್ಬಿಣದ ಕಂಬಗಳು ಕಟ್ಟಿಗೆಯ ಕಂಬಗಳು ಇವುಗಳ ವಿಷಯದಲ್ಲಿ ನಾನು ಹೇಳುತ್ತೇನೆ. ಈ ವಿಷಯದಲ್ಲಿ ನಮ್ಮ ಸ್ನೇಹಿತರು ಕೆಲವರು ಕೆಲವು ವಿಷಯಗಳನ್ನು ಹೇಳಿದ್ದಾರೆ. ಕಂಬಗಳನ್ನು ತಯಾರು ಮಾಡುವುದಕ್ಕೆ ಆರ್ಡರನ್ನು ಕೊಡುವಾಗ ಯಾವ ಸ್ಪೆಷ್ಯು ಇರಬೇಕು ಎನ್ನುವುದನ್ನು ವಿಚಾರ ಮಾಡಬೇಕಾಗಿತ್ತು. ಈಗ ಆ ಕಂಬಗಳು ಉಪಯೋಗವಾಗುತ್ತವೆಯೇ ಎನ್ನುವ ಪ್ರಸಂಗ ಬಂದಿದೆ. ಹುಬ್ಬಳ್ಳಿ ಡಿವಿಜನ್‌ನಲ್ಲಿ ಇಂಥಾ ಕಂಬಗಳನ್ನು ತಂದಿದ್ದಾರೆ. ಆ ಕಂಬಗಳಲ್ಲಿ 3 ಅಡಿ ಕಡಿಮೆಯಾಗಿದೆ. ಅದಕ್ಕೋಸ್ಕರ ಅವುಗಳ ಉದ್ದವನ್ನು ಜಾಸ್ತಿ ಮಾಡುವುದಕ್ಕೆ ಜೋಡಿಸುವಂತಹ ಪ್ರಸಂಗ ಬಂದಿದೆ. ಒಳ್ಳೆಯ ಕಬ್ಬಿಣದ ಕಂಬಗಳನ್ನು 20 ಅಡಿ ಉದ್ದವಿರತಕ್ಕಂಥ ಕಂಬಗಳನ್ನು ವೆಲ್ಡ್ ಮಾಡಿ ಸೇರಿಸುವಂತಹ ಪ್ರಸಂಗ ಬಂದಿದೆ. ಇಷ್ಟ್ರೆಲ್ಲ. ಕಟ್ಟಿಗೆಯ ಕಂಬಗಳ ಒಗ್ಗೆ ಹೇಬೇಕಾದರೆ ಹಳೆಯ ಕಂಬಗಳನ್ನು ತಂದು ಲೈನುಗಳಿಗೆ ಹಾಕುವಂತಹ ಪ್ರಯತ್ನ ನಡೆದಿದೆ. ಆ ಕಂಬಗಳೂ ಸಹ ಸರಿಯಾಗಿಲ್ಲ. ಈ ವಿಷಯದಲ್ಲಿ ನಾನು ಹೇಳುವುದು ಇಷ್ಟೆ. ಯಾವುದೇ ಒಂದು ಸಾಮಾನನ್ನಾಗಲೀ ತೆಗೆದುಕೊಳ್ಳುವಾಗ ಅದನ್ನು ಸಾಕಷ್ಟು ವಿಚಾರಮಾಡಿ ತೆಗೆದುಕೊಂಡರೆ ಒಳ್ಳೆಯದು.

ಇನ್ನೊಂದು ವಿಷಯ ಹೇಳುತ್ತೇನೆ. ಮುಖ್ಯ ಮಂತ್ರಿಗಳು ಹೋದಕಡೆಗಳಲ್ಲೆಲ್ಲಾ ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುತ್ತೇವೆ, ಪಂಪು ಸೆಟ್ಟುಗಳನ್ನು ಒದಗಿಸುತ್ತೇವೆ. ಇರಿಗೇಷನ್ನಿಗೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡುತ್ತೇವೆಂದು ಹೇಳಿ ಬಂದಿದ್ದಾರೆ. ಈಗಾಗಲೇ ಕೆಲವು ಹಳ್ಳಿಯವರು ಪಂಪುಸೆಟ್ಟುಗಳಿಗಾಗಿ ಡಿಪಾಜಿಟ್ ಕಟ್ಟಿದ್ದಾರೆ ಆದರೆ ಆ ಡಿವಿಜನ್‌ನಲ್ಲಿ ವಿದ್ಯುಚ್ಛಕ್ತಿ ಒದಗಿಸುವುದಕ್ಕೆ ಲೈನನ್ನು ಹಾಕಲು ಸರ್ವೆಯನ್ನು ಕೂಡ ಮಾಡಿಲ್ಲ. ಅಲ್ಲಿನ ಜನಗಳಿಗೆ ಯಾವಾಗ ವಿದ್ಯುಚ್ಛಕ್ತಿ ದೊರೆಯುತ್ತದೆ ಎನ್ನುವುದು ಗೊತ್ತಿಲ್ಲ. ಹುಬ್ಬಳ್ಳಿ ಡಿವಿಜನ್‌ನಲ್ಲಿ ಸಾವಿರಾರು ಪಂಪು ಸೆಟ್ಟುಗಳಿಗೆ ಅರ್ಜಿಗಳನ್ನು ಹಾಕಿ ಡಿಪಾಜಿಟ್ ಕಳುಹಿಸಿ ಕೊಟ್ಟಿದ್ದಾರೆ. ಇಷ್ಟಾದರೂ ಕೂಡ ಆ ಪ್ರದೇಶಕ್ಕೆ ವಿದ್ಯುಚ್ಛಕ್ತಿಯನ್ನು ಒದಗಿಸುವುದಕ್ಕೆ ಸರ್ವೆಯನ್ನೇನಾದರೂ ಮಾಡಿದ್ದಾರೆಯೇ ಎಂದು ನಾನು ಕಟ್ಟುನಿಟ್ಟಾಗಿ ಸರ್ಕಾರದವರನ್ನು ಕೇಳುತ್ತೇನೆ ಅದಕ್ಕೋಸ್ಕರ ಮೊದಲು ಆ ಡಿವಿಜನ್ನಿನಲ್ಲಿ ವಿದ್ಯುಚ್ಛಕ್ತಿಯನ್ನು ಒದಗಿಸಲು ಸರ್ವೆ ಕೆಲಸವನ್ನು ಮಾಡಿಸಬೇಕೆಂದು ನಾನು ಹೇಳುತ್ತೇನೆ.

ಇನ್ನೊಂದು ವಿಷಯ. 5 ಸಾವಿರ ಜನಸಂಖ್ಯೆ ಇರುವ ಪಟ್ಟಣಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಲು ಪ್ರಾಶಸ್ತ್ಯವನ್ನು ಕೊಡುತ್ತೇವೆ ಎಂದು ಹೇಳುತ್ತಾರೆ. ಶಿಗ್ಗಾವಿ ಮತ್ತು ಲಕ್ಷ್ಮೇಶ್ವರ ಗಳಲ್ಲಿ 18 ಸಾವಿರ ಜನಸಂಖ್ಯೆ ಇದ್ದರೂ ಕೂಡ ಅಲ್ಲಿಗೆ ವಿದ್ಯುಚ್ಛಕ್ತಿಯನ್ನು ಪೂರೈಕೆಮಾಡದೆ ಇರುವಂತಹ ಒಂದು ಪರಿಸ್ಥಿತಿ ಇದೆ. ಶ್ರೀಮಾನ್ ಷಂಸುದೀನ್ ಸಾಹೇಬರು ಇದ್ದಾಗಲೇ 1963ನೇ ಇಸವಿ ಆಗಸ್ಟ್ ತಿಂಗಳಿನಲ್ಲಿ ಲಕ್ಷ್ಮೇಶ್ವರಕ್ಕೆ ವಿದ್ಯುಚ್ಛಕ್ತಿಯನ್ನು ಕೊಡುತ್ತೇವೆ ಎಂದು ಹೇಳಿದ್ದರು. ಕಂಬಗಳನ್ನು ನೆಟ್ಟಿದ್ದೇವೆ, ಇನ್ನೇನು ವೈರ್ ಹಾಕಿ ವಿದ್ಯುಚ್ಛಕ್ತಿಯನ್ನು ಕೊಡುತ್ತೇವೆಂದು ಹೇಳಿದ್ದರು. ಆದರೂ ಸಹ ಆ ಕೆಲಸ ಇನ್ನೂ ಪೂರ್ತಿ ಆಗುವ ಪರಿಸ್ಥಿತಿಯಲ್ಲಿ ಇಲ್ಲ. ಮಾನ್ಯ ಮುಖ್ಯ ಮಂತ್ರಿಗಳಿಗೆ ಲಕ್ಷ್ಮೇಶ್ವರ ಹೊಸದೇನು ಅಲ್ಲ. ಆದು ದೊಡ್ಡ ಊರಾಗಿದ್ದರೂ ಸಹ ಅಲ್ಲಿ ಯಾವ ಸೌಕರ್ಯವೂ ಇಲ್ಲ. ಆದ್ದರಿಂದ ನಾನು ಹೇಳುವುದೇನೆಂದರೆ 5 ಸಾವಿರ ಜನಸಂಖ್ಯೆ ಇರುವ ಊರುಗಳು ಯಾವು ಇವೆಯೋ ಅವುಗಳಿಗೆಲ್ಲಾ ಮೊಟ್ಟಮೊದಲು ವಿದ್ಯುಚ್ಛಕ್ತಿಯನ್ನು ಒದಗಿಸುವಂತೆ ಆದೇಶವನ್ನು ಕೊಡಬೇಕು.

ಶ್ರೀ (ಶ್ರೀ ಸಿದ್ಧಯ್ಯ ಕಾಶೀಮಠ)

ಇನ್ನು ನಮ್ಮ ರಾಜ್ಯದಲ್ಲಿ ಕೈಗಾರಿಕೆಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವುದರಲ್ಲಿ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡಬೇಕೆಂದು ಹೇಳುತ್ತಿರೆ. ಅದರೆ ಅದನ್ನು ಕಾರ್ಯತಃ ಮಾಡುವುದಿಲ್ಲ. ಈಗ ಉದಾಹರಣೆಗೆ ಹೇಳುವುದಾದರೆ ಹುಬ್ಬಳ್ಳಿಯಲ್ಲಿ ಒಂದು ಕೈಗಾರಿಕೆಗೆ ವಿದ್ಯುಚ್ಛಕ್ತಿಯನ್ನು ಕೇಳಿದಾಗ ವಿದ್ಯುಚ್ಛಕ್ತಿಯನ್ನು ಕೊಡದ ಇರತಕ್ಕ ಪ್ರಸಂಗ ಇದೆ. ಹೀಗಾದರೆ ಕೈಗಾರಿಕೆಗಳು ಹೇಗೆ ಬೆಳೆಯುತ್ತವೆ? ಅದಕ್ಕಾಗಿ ಎರಿಕ್ಟ್ರಿಕಲ್ ಡಿವಿಜನ್‌ಗಳನ್ನು ಹೆಚ್ಚು ಮಾಡಬೇಕು. ಈಗ ಚಿತ್ರದುರ್ಗದಲ್ಲಿ ಒಂದು ಡಿವಿಜನ್ ಇದೆ. ಆ ಡಿವಿಜನ್‌ನನ್ನು ಹೆಚ್ಚುಮಾಡಿ ಧಾರವಾಡಾ ಜಿಲ್ಲೆಯಲ್ಲಿ ಇನ್ನೊಂದು ಹೊಸ ಡಿವಿಜನ್ ಮಾಡಬೇಕೆಂದು ನಾನು ಹೇಳುತ್ತೇನೆ.

1-30 P.M.

ನಮ್ಮ ಸರ್ಕಾರದಲ್ಲಿ ಸೀನಿಯಾರಿಟಿ ಪಟ್ಟಿಯಬಗ್ಗೆ ತೊಂದರೆಗಳಿದ್ದ ಹಾಗೆ ಎರೆಕ್ಟ್ರಿಸಿಟಿ ಬೋರ್ಡಿನಲ್ಲಿಯೂ ಇವೆ. ನೂರು ರೂಪಾಯಿ ಸಂಬಳ ಮತ್ತು ಅದಕ್ಕಿಂತ ಕೆಳಗೆ ಸಂಬಳ ಪಡೆಯುವ ನೌಕರದಾರರನ್ನು ಅದಷ್ಟು ಮಟ್ಟಿಗೂ ಅವರವರ ಡಿವಿಜನ್‌ಗಳಲ್ಲಿ ಇಡುವುದಕ್ಕೆ ಪ್ರಯತ್ನ ಮಾಡಿದರೆ ಒಳ್ಳೆಯದಾಗುತ್ತದೆ. ಮೈಸೂರಿನಲ್ಲಿರತಕ್ಕವನನ್ನು ಬಿಜಾಪುರದ ಕೊನೆಯಲ್ಲಿರುವ ಹಳ್ಳಿಗೆ ಹಾಕಿದರೆ ಯಾವ ತರಹ ಇರುತ್ತಾನೆ ಎಂದು ವಿಚಾರ ಮಾಡಬೇಕು. ಸರ್ಕಾರದವರು ಸೂಕ್ಷ್ಮ ಅದೇಶವಿತ್ತು ಕಡಮೆ ಸಂಬಳ ಬರುವ ನೌಕರದಾರರನ್ನು ಆಯಾ ಡಿವಿಜನ್ನುಗಳಲ್ಲಿಯೇ ಇಡುವಂತೆ ಪ್ರಯತ್ನಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಮುಂದಾದರೂ ವಿದ್ಯುಚ್ಛಕ್ತಿ ಪೂರೈಕೆ ವಿಚಾರದಲ್ಲಿ ಹೆಚ್ಚು ಶ್ರದ್ಧೆವಹಿಸಬೇಕು. ಅದು ಎಲ್ಲಿ ನ್ಯೂನಗಳಿಗೂ ಸರಿಯಾಗಿ ಮುಟ್ಟುವಂತೆ ಮಾಡಲು ಬೇಕಾದ ಕಂಬ, ತಂತಿ ಇಂಥ ಸಾಮಗ್ರಿಗಳನ್ನು ಪೂರೈಕೆಮಾಡಿ ಅವು ಇಲ್ಲ ಎಂಬು ಹೇಳದಂತೆ ಮಾಡಬೇಕು. ಹೆಚ್ಚಿನ ರೊಕ್ಕ ಬೇಕಾದರೂ ಕೂಡ ಕೊಟ್ಟು ವಿದ್ಯುಚ್ಛಕ್ತಿಯನ್ನು ದೇಶದಲ್ಲಿ ಕೈಗಾರಿಕೆಗಳು ಮತ್ತು ನೀರಾವರಿಗೆ ಪೂರೈಸಲೂ ಹೆಚ್ಚಿನ ಪ್ರಾಶಸ್ತ್ಯ ಕೊಡಬೇಕೆಂದು ತಿಳಿಸಿ ಈ ತಂಾವಿಗೆ ಬೆಂಬಲಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ.

Sri B. R. SUNTHANKAR (Belgaum City).—This resolution moved by the Honourable Chief Minister seeks to raise the limit of borrowings from Rs. 10 crores to 20 crores by the Electricity Board. I wish to oppose this resolution for reasons that I will give now. Firstly, looking to the affairs of the Electricity Board, the working of the Board does not assure us or it does not guarantee that if the borrowing limit is increased from Rs. 10 crores to 20 crores, it will be properly and fully utilised. The Honourable Members who spoke before me, particularly Mr. Gopala Gowda and to a certain extent Mr. Siddiah Kashimatt, also have pointed out certain defects in the working of the Board. The accounts of the Electricity Board seem to be in a chaotic condition. The Electricity Board was constituted on 1st October 1957. More than six years have elapsed, but yet the accounts are not audited by the Accountant General.

Mr. SPEAKER.—What I want to say is that one of the Report has been discussed on the floor of the House.

Sri B. R. SUNTHANKAR—The Financial Statement and the budget were discussed. I would refer to the Audit Report 1964. On pages 88, para 86 it is said:

"Delay in finalisation of accounts.—In paragraph 48 of the Audit Report, 1962 mention was made of the circumstances in which the accounts prepared by the Board for the period of 1st October 1957 to 31st March 1958 could not be certified by Audit.

> The position remains the same even now (March 1964). The accounts for the years 58-59 to 62-63 are also yet to be compiled."

This Audit Report more clearly shows in what stage the accounts of the Board are. Even the accounts for the first year could not be certified by audit and for later years, since 58-59, accounts are not even compiled, much less submitted for audit. For want of correct and clear accounts, we do not know the financial condition, we are not in a position to assess correctely the financial position of the Board. After the constitution of the Board, for the first time the Financial Statement of the Bord was discussed during the last budget session. Only once we were given the chance and all the budget estimates of the previous years were kept before the House for discussion. As a matter of fact, audit reports are required to be laid annually before the State Legislature. That has not been done. Accounts are not compiled for years together. Under the circumstances, how can the members of the House give their sanction to the increase from Rs. 10 to 20 crores. Personally, I refuse to give my accord to this increase in borrowing. This Board has floating loans, has been borrowing, but it has been found out that the moneys borrowed were not utilised, were remaining idle with the Board. That is why the Board was compelled to invest at lower rates of interest and thereby incur losses. On page 88 of the Audit Report, it is said:

> "As a result of floating open market loans far in advance of requirements and investing the proceeds of the loan at lower rates of interest, the Board incurred a loss of Rs. 2.06 lakhs during the year 1962-63."

The Board has been floating loans, not utilising them.

> "It is however seen that the Board Subsequently floated another loan for Rs. 300 lakhs in September 1963 which was also added to the balance of Rs. 265 lakhs under investment in short term and call deposits. The balance of such investments stood at Rs. 490 lakhs in January 1964."

So it clearly shows that the Electricity Board is not in a position to fully utilise the loans floated by it. So under the Circumstances how can we give our consent to the increase of this limit to Rs. 20 crores. These are many reasons for opposing this resolution. One more reason. It is one of the obligations of the Electricity Board to safeguard the interests of the consumers. In new Mysore area, there are about a dozen private concerns. This question was referred particularly in regard to Belgaum during the question hour and I thank the Chief Minister for his assurance to look into the matter. But there are about a dozen concerns in the integrated areas and these private concerns are simply looting the consumers. The Board also will have to do something in the matter. I would request that all these concerns, private concerns should be taken over by the Electricity Board and

(SRI B. R. SUNTHANKAR)

the necessary legislation should be gone in to through this House. I do not know whether my infromation is correct but there was proposal to draft, such a resolution and to get it passed by this House.

Mr. SPEAKER.—Resolution or Bill ?

Sri B. R. SUNTHANKAR.—A Bill to nationalise the private concerns but I do not know what happened to that.

According to my information, the Belgaum company, which is very influential at Bombay, Delhi and other State capitals, have succeeded in bringing pressure through Delhi upon this Government and therefore I understand that the idea of having a legislation for nationalisation of private companies has been altogether dropped. This is very sad. Government should take a firm attitude to go through the nationalisation of the private electric companies. The Congress party and the Government are committed to socialism and nationalisation of private electric concerns is one of the socialistic programmes. I would request the Chief Minister to see that the private concerns are taken over and handed over to the Mysore Electricity Board.

ಶ್ರೀ ಎಸ್. ರುದ್ರಪ್ಪ (ಕಲಗಿ).—ಮಾನ್ಯ ಅಧ್ಯಕ್ಷರೆ, ನಮ್ಮ ಮುಂದಿರುವ ಗೊತ್ತುವಳಿಯನ್ನು ಸ್ವಾಗತಿಸುತ್ತ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ಹೊಸದಾಗಿ ನಮಗೆ ಶರಾವತಿಯಲ್ಲಿ ಉತ್ಪನ್ನವಾಗುವ ವಿದ್ಯುಚ್ಛಕ್ತಿ ಬರುವುದಾಗಿದೆ. ಈಗಾಗಲೇ ತುಂಗಭದ್ರಾದಿಂದ ಬರುತ್ತಿದೆ. ಹಳ್ಳಿಗಳವರಿಂದಲೂ, ಉದ್ಯಮದಾರರಿಂದಲೂ, ಪಟ್ಟಣಗಳಿಂದಲೂ ವಿದ್ಯುಚ್ಛಕ್ತಿಗಾಗಿ ಹೆಚ್ಚು ಹೆಚ್ಚು ಬೇಡಿಕೆ ಬರುತ್ತಿರುವುದರಿಂದ ಇಂತಹ ಒಂದು ಗೊತ್ತುವಳಿ ಬಂದಿದೆ. ಹೆಚ್ಚು ವಿದ್ಯುಚ್ಛಕ್ತಿಯನ್ನು ಒದಗಿಸಬೇಕಾಗಿದೆ. ಈ ದೃಷ್ಟಿಯಿಂದ ನಾನು ಇದನ್ನು ಸುಸ್ವಾಗತಿಸಿ ಬೆಂಬಲಿಸುತ್ತೇನೆ.

ಗುಲ್ಬರ್ಗದ ಬಗ್ಗೆ ಹೇಳುವುದಾದರೆ, ಎರಡುವರ್ಷದಿಂದ ವಿದ್ಯುಚ್ಛಕ್ತಿ ಬೋರ್ಡಿನವರು ಅಲ್ಲಿ ಕೆಲಸಮಾಡುವುದಕ್ಕೆ ಹತ್ತಿದ್ದಾರೆ. ಇದುವರೆಗೆ ಗುಲ್ಬರ್ಗ ಜಿಲ್ಲೆಯ ನಾಲ್ಕು ತಾಲ್ಲೂಕುಗಳಿಗೆ ಮಾತ್ರ ವಿದ್ಯುಚ್ಛಕ್ತಿ ಪೂರೈಕೆಮಾಡಿದ್ದಾರೆ. ಅಲ್ಲಿ ಹತ್ತು ತಾಲ್ಲೂಕುಗಳಿವೆ, ಆ ಹತ್ತು ತಾಲ್ಲೂಕುಗಳಲ್ಲಿ ಮಂದಗತಿಯಿಂದ ಕೆಲಸ ನಡೆಯುತ್ತಿದೆ. ಹೈದರಾಬಾದು ಕರ್ನಾಟಕದ ಬಗ್ಗೆ ನಮ್ಮ ಮುಖ್ಯ ಮಂತ್ರಿಗಳಿಗೆ ಸಹಾನುಭೂತಿ ಮತ್ತು ಅಭಿಮಾನವಿದೆ. ಆದರೆ ಅಲ್ಲಿನ ಅಧಿಕಾರಿಗಳು ಅಷ್ಟು ಆಸ್ಥೆ ವಹಿಸಿ ಕೆಲಸಮಾಡುತ್ತಿಲ್ಲವೆಂದು ಹೇಳಬೇಕಾಗಿದೆ. ಸ್ವಾಮಿ, ವಿದ್ಯುಚ್ಛಕ್ತಿಯನ್ನು ಗುಲ್ಬರ್ಗ, ಆಲಂದ್, ಚಿತಾಪುರ, ಸೆಡಮ್ ಈ ತಾಲ್ಲೂಕುಗಳಿಗೆ ಪೂರೈಸಿದ್ದಾರೆ. ಇನ್ನೂ ಆರು ತಾಲ್ಲೂಕುಗಳಿಗೆ ಕೊಟ್ಟಿಲ್ಲ. ಗ್ರಾಮಾಂತರ ಎಂದರೆ, ಐದುಸಾವಿರ ಜನಸಂಖ್ಯೆ ಮತ್ತು ಅದಕ್ಕಿಂತ ಹೆಚ್ಚಿರುವ ಎಂಟು ಹತ್ತು ಹಳ್ಳಿಗಳನ್ನು ನರ್ವೆಮಾಡಿದ್ದಾರೆ. ಆದರೆ ವಿದ್ಯುಚ್ಛಕ್ತಿ ಪೂರೈಕೆಮಾಡಿಲ್ಲ. ಶ್ರೀಮಾನ್ ವೀರೇಂದ್ರ ಪಾಟೀಲ್ ಅವರು ಒಂದು ನೋಟ್ ಕೊಟ್ಟಿದ್ದಾರೆ. ಹೋರಾಪುರ, ಷಹಾಪುರ, ಯಾದ್ಗಿರ್, ಗುರುಮಟ್ಕಲ್ ಇಲ್ಲಿಗೆ ಬರಬೇಕಾದರೆ ಇನ್ನೂ ಎರಡು ತಿಂಗಳುಗಳಾಗುತ್ತದೆ ಎಂದು ಹೇಳಿದ್ದಾರೆ. ಇವಕ್ಕೆ ಈಗಾಗಲೇ ಪೂರೈಕೆ ಆಗಬೇಕಾಗಿತ್ತು ಆದರೆ ಇನ್ನೂ ಆಗಿಲ್ಲ. ಇನ್ನೂ ಷಾಪುರ, ವಾಡಿ, ನಾಲ್‌ವಾರ, ಅಫಸಲ್‌ಪುರ, ಕಾಮರಾಪುರ ಪ್ರದೇಶದ ಹಳ್ಳಿಗಳಿಗೆ ಬಂದಿಲ್ಲ. ಅಲ್ಲಿ ಮೆಟೀರಿಯಲ್ಸ್ ಜಮಾವಣೆವಾಡಿ ಎಂದು ಹೇಳಿದ್ದಾರೆ. ಕೆಲಸ ಬಹಳ ವಿಳಂಬವಾಗಿದೆ. ಬೀದರ ಗಡಿಯಲ್ಲಿ ಆಂಧ್ರಪ್ರದೇಶದಿಂದ ಹತ್ತುಹಳ್ಳಿಗಳಿಗೆ ಪೂರೈಸುತ್ತೇವೆಂದು ಹೇಳಿದ್ದಾರೆ. ಇದೂವರೆಗೂ ಅದು ಆಗಿಲ್ಲ. ಆಂಧ್ರಪ್ರದೇಶದ ಆರು ಹಳ್ಳಿಗಳಿಗೆ ಪೂರೈಕೆಮಾಡಿದ್ದಾರೆ. ಆದರೆ ಬೀದರ್ ಗಡಿಯಲ್ಲಿರುವ ಹಳ್ಳಿಗಳಿಗೆ ಪೂರೈಕೆಯಾಗಿಲ್ಲ. ಈ ಬಗ್ಗೆ ತೀವ್ರ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿ.

ಮೂರನೆಯದಾಗಿ ತುಂಗಭದ್ರಾ ಯೋಜನೆಯಿಂದ ದಾವಣಗೆರೆ ಮತ್ತು ಇನ್ನು ಕೆಲವು ಊರುಗಳಿಗೆ ವಿದ್ಯುಚ್ಛಕ್ತಿಯನ್ನು ಕೊಟ್ಟಿದ್ದಾರೆ. ಇದನ್ನು ಗುಲ್ಬರ್ಗಕ್ಕೆ ತಿರುಗಿಸಬೇಕು. ಶರಾವತಿಯಿಂದ ಬರುವ ವಿದ್ಯುಚ್ಛಕ್ತಿಯನ್ನು ದಾವಣಗೆರೆಗೆ ಕೊಡಬೇಕೆಂದು ಪ್ರಾರ್ಥಿಸುತ್ತೇನೆ. ಗುಲ್ಬರ್ಗದಲ್ಲಿ ಒಂದೇ ಕನ್‌ಸ್ಟ್ರಕ್ಷನ್ ಡಿವಿಜನ್ ಇದೆ. ಯಾದ್ಗಿರ್ ಒಂದು ಬೇಕಾಗಿದೆ. ಹೀಗೆಯೇ ವಿದ್ಯುಚ್ಛಕ್ತಿ

2-00 P.M.

Mr. SPEAKER.—One hour allotted is over. I extend the time by half an hour.

† Sri GANJI VEERAPPA (Harihar).—Mr. Speaker, I whole-heartedly support the resolution placed before this House and moved by the Chief Minister. It is a period of expansion and specially after we get one million kilowatts from Sharavathi and after undertaking so many other expansion schemes, the Board naturally requires more money. A criticism was made with regard to investment of money that was borrowed. I also feel that wish regard to investment we must not suffer any loss by way of interest because by borrowing we pay more interest and by investment if we get lesser interest we will lose. Therefore, care must be taken to see that we borrow money whenever there is absolute need and we must borrow only a few months earlier and not one or two years earlier so that we may not lose interest. Care must be taken for proper investment of our funds also. One thing I want to suggest at this juncture is this : we see that so many sanctioned works are not executed because the Department says that they have no materials like wires, insulators, etc. I do not know whether heavy insulators have to be imported from foreign countries. Sir, it is necessary here to see that these materials are secured from other countries so that execution of these works is not hindered because in some places power is available, need is there and funds are there, but because some of the materials like wires are to be imported from foreign countries, power could not be supplied. I do not know whether orders are placed or what is the difficulty in actually supplying materials. I find that for want of transformers, several works are held up. Arrangements must be made to see that these materials are got and if need be, manufacturing must be started here so that heavy insulators and wires are manufactured in our country. I make another suggestion. There is great necessity for underground cables in big cities and towns in modern countries looking to the safety of the people. This suggestion may be borne in mind so that in all these places, underground cable system may be introduced. On the whole, we have to welcome this motion because the Board requires more borrowing capacity and we support this motion to increase it from Rs. 10 crores to Rs. 20 crores.

Sri SANJEEVANATH AIKALA (Suratkal).—If there is one replica of this Government, it is the Electricity Board. To put it in short form, its sum and substance is irregularity, favouritism and corruption. I can quote several instances where Electricity is made available only to people on certain recommendation by the people belonging to certain political parties. I have got a glaring example which I may bring to your notice here. A particular person who was interested in starting ice-cream and cold storage Uuit applied for power. He is from my constituency. I made an enquiry about his requirement and about his capacity for investment and wrote a letter to the Electricity Board stating that particular man really deserved electricity. A few months later, I received

(SRI. SANJEEVANATH AIKALA)

a reply that I and the particular man may apply to the Executive Engineer, Mangalore, who will register the requirements and arrange power supply when Sharavathi power becomes available. The letter was dated 11th May 1964. But on 19th May 1964 the said Ice cream Factory was inaugurated. When I received this letter that particular gentleman saw some big congresswala from my place who assured him to get power. That congresswala. Said : to him "Why did you approach Alkala ; he belongs to P. S. P. ; he has no voice with the ministers and he cannot get you anything we will get you power." That congreswala approached the Chief Minister and I was told that the Chief Minister directed the Electricity Board to sanction whatever power he requires. He was given 15 H. P. The function of opening the said Ice Candy Factory was presided over by the Chief Minister.

Mr. SPEAKER.—The Chief Minister's presiding over a function has no connection with this motion.

Sri SANJEEVANATH AIKALA.—I am voicing the opinion of people who are gathered there. Why I am saying is this : if people want power, if they have to approach the Electricity Board through a M. L. A. or M. L. C., what about people who do not know any of them, or who dislike approaching them to get electric power. I could have approached the Board directly. But I did not want to use my political influence. I do not interfere with these things. I say cases should be considered on merit. When I received a reply on 11th May that power will be supplied only after Sharavathi Electricity is made available, on 19th May the function was arranged and power was given. That is how the Electricity Board functions. Then regarding the members of the Electricity Board, what is the use of nominating such members who have got so many other functions to attend to? They have so many other social affairs to look after and they cannot attend meetings. Why do you oppoint such people who cannot devote their attention to important urgent matters about irregularities and wastages there. If I were to speak about irregularities and favouritisms shown in sanctioning power, it will be a small Ramayana. I therefore positively say that this Board should not be authorised to take more loan than we have given. On the other hand, it should be still curtailed. Whatever they require, they must come before the House and then we will sanction on the merit of the demand ; not otherwise. We must not allow such huge and wide power to the Electricity Board to borrow as and when they like and again invest it on smaller interest. So, I oppose this motion.

† ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಅಧ್ಯಕ್ಷರೇ, ವಿದ್ಯುಚ್ಛಕ್ತಿ ಮಂಡಲಯ ಈಗಿರತಕ್ಕ ಸ್ಥಿತಿಗತಿಗಳನ್ನು ನೋಡಿ ಅದಕ್ಕೆ ಹೆಚ್ಚಿನ ರೀತಿಯಲ್ಲಿ ಹಣದ ಸೌಲಭ್ಯವನ್ನು ಒದಗಿಸಲು ಸಾಲ ಮಾಡುವುದಕ್ಕೆ ನಮಗೆ ಅವಕಾಶಮಾಡಿಕೊಡಬೇಕೆಂದು ಹೇಳಿ ನಮ್ಮ ಮುಂದೆ ತಂದಿರತಕ್ಕ ಈ ನಿರ್ಣಯ ನಮಗೆಲ್ಲರಿಗೂ ಕೂಡ ಅವ್ಯಾಯಮಾನವಾಗಿದ್ದರೂ ಇವತ್ತು ಮುಖ್ಯ ಮಂತ್ರಿಗಳು ಈ ವಿಷಯವನ್ನು ಪ್ರಸ್ತಾಪ ಮಾಡುವಾಗ ನಮ್ಮ ರಾಜ್ಯದಲ್ಲಿ ಎಷ್ಟು ಶಕ್ತಿಯನ್ನು ಉಪಯೋಗ ಮಾಡಿಕೊಳ್ಳುತ್ತಾ ಇದ್ದೇವೆ ಎಷ್ಟು ವಿದ್ಯುಚ್ಛಕ್ತಿಯನ್ನು ಹೊರಗಡೆ ಪ್ರಾಂತಗಳಿಗೆ ಕೊಡುತ್ತಾ

ಇದ್ದೇವೆ ಎಂಬುದನ್ನು ಹೇಳಿ ಅದಕ್ಕೇ ಇಷ್ಟು ಹಣವನ್ನು ಕೇಳುತ್ತಾ ಇದ್ದೇವೆ ಎಂದು ಹೇಳಿದ್ದಾರೆ, ಅದು ಸಕಾರಣವಾಗಿತ್ತು ಎಂದು ಅನಿಸುತ್ತದೆ. ಈಗ ಅವರು ನದರನ್ ಗ್ರಿಡ್‌ಗೆ ಒಪ್ಪಿಕೊಂಡ ಮೇರೆ, ಎರ್ಲಾ ರಾಜ್ಯಗಳ ವಿದ್ಯುಚ್ಛಕ್ತಿಯನ್ನು ಅಲ್ಲಿಗೆ ಹಾಕಿದಮೇರೆ ಹೆಚ್ಚಾಗಿರತಕ್ಕ ವಿದ್ಯುಚ್ಛಕ್ತಿಯನ್ನು ಹೊರಗಡೆಗೆ ಕೊಡುವುದಾದರೆ 10 ಕೋಟಿ ರೂಪಾಯಿ ಸಾಲ ಮಾಡತಕ್ಕ ಮಿತಿಗೆ ಅದಿಕಾರ ಕೊಟ್ಟ ಪಕ್ಷದಲ್ಲಿ ಅವರು 3 ಕೋಟಿ ರೂಪಾಯಿ ಮಾಡಬಹುದು, 2 ಕೋಟಿ ರೂಪಾಯಿ ಮಾಡಬಹುದು, 75 ಲಕ್ಷ ರೂಪಾಯಿ ಮಾಡಬಹುದು. ಅದಕ್ಕಾಗಿ ಇದನ್ನು ತಂದಿರುವುದನ್ನು ನೋಡಿದರೆ ನನಗಾದರೂ ಅನಿಸುತ್ತದೆ ಒಂದು ಜವಾಬ್ದಾರಿಯುತವಾದ ಮಂಡಲಿಗೆ, ಸ್ಟ್ಯಾಟ್ಯೂಟರಿ ಬಾಡಿಗೆ, ಆಟಾನಮಸ್ ಬಾಡಿಗೆ ಇಷ್ಟೊಂದು ಅಧಿಕಾರವನ್ನು ಕೊಡುವುದಾದರೆ ನಾಳೆ ಎರ್ಲಾದರೂ ಅಸ್ತವ್ಯಸ್ತವಾದರೆ ಅದರ ಆಗುಹೋಗುಗಳನ್ನು ನೋಡಿಕೊಳ್ಳುತ್ತಾ ಇರತಕ್ಕ ಸರ್ಕಾರ ಅದನ್ನು ಹೊರಬೇಕಾದ ಪ್ರಸಂಗ ಬಂದರೆ ಆಗ ಜನತೆಯಮೇಲೆ ದುರ್ಭರವಾದ ಪ್ರಸಂಗ ಬರುತ್ತದೆ; ಅದನ್ನು ಯೋಚನೆ ಮಾಡಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ. 64ನೇ ಆಡಿಟ್ ಪ್ರಕಾರ ಅವರು ಸಾಲ ಮಾಡಿರತಕ್ಕ ಹಣ ಖರ್ಚಾಗಿಲ್ಲ ಅದನ್ನು ಕಾರ್‌ಡಿಪಾಸಿಟ್‌ಮೇಲೆ ಇಟ್ಟಿದ್ದಾರೆ. ಒಂದು ಬ್ಯಾಂಕ್‌ನಲ್ಲಿ ಆ ಹಣವನ್ನೆಲ್ಲಾ ಇಟ್ಟು ಬ್ಯಾಂಕಿನವರು ಅದರಿಂದ ಹಣ ಸಂಪಾದನೆ ಮಾಡುತ್ತಾ ಇದ್ದಾರೆ. ತಮಗೆ ಬೇಕಾದವರಿಗೆ ಹಣ ಕೊಡುತ್ತಾ ಇದ್ದಾರೆ. ಇವತ್ತು ಎರೆಕ್ಟ್ರಿಸಿಟಿ ಬೋರ್ಡಿನವರಿಗೆ 4 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಆಗಿಲ್ಲ ಹಾಗಿರುವಾಗ ಇನ್ನೂ 10 ಕೋಟಿ ರೂಪಾಯಿಗಳ ಸಾಲ ಮಾಡಿ 14 ಕೋಟಿ ರೂಪಾಯಿಗಳ ಹಣವನ್ನು ಯಾವ ರೀತಿ ಖರ್ಚು ಮಾಡುತ್ತೀರಿ ಅಂತ ಗೊತ್ತಾಗುವುದಿಲ್ಲ. ಎರೆಕ್ಟ್ರಿಸಿಟಿ ಬೋರ್ಡ್ ಡಿಮ್ಯಾಂಡ್ ಬಂದಾಗ ಮಾನ್ಯ ಮುಖ್ಯಮಂತ್ರಿಗಳವರಲ್ಲಿ ಮನವಿ ಮಾಡಿಕೊಂಡೆ ಎರೆಕ್ಟ್ರಿಸಿಟಿ ಬೋರ್ಡ್ ಸರಿಯಾಗಿ ಜನಗಳ ಮನಸ್ಸಿಗೆ ತೃಪ್ತಿಕರವಾದ ರೀತಿಯಲ್ಲಿ ಕೆಲಸ ಮಾಡುತ್ತಾ ಇಲ್ಲ, ವೈರ್ಸ್, ಇನ್‌ಸ್ಯುಲೇಟರ್ಸ್, ಟ್ರಾನ್ಸ್‌ಫರ್ಮರ್ಸ್ ಬೇಕು ಎಂದರೆ ಯಾವುದೂ ಕೂಡ ಸಕಾಲಕ್ಕೆ ಸಿಕ್ಕುತ್ತಾ ಇಲ್ಲ. ಈ ಎರ್ಲಾ ವಿಧವಾದ ಕಾರ್ಯಕ್ರಮವನ್ನು ನೋಡಿದರೆ ಮನಸ್ಸಿಗೆ ಬಹಳ ಜಿಗುಪ್ಸೆಯುಂಟಾಗುವುದರಲ್ಲಿ ಅನುಮಾನವೇನೂ ಇಲ್ಲ. 10-6 ಸಾವಿರ ಪೌಂಡ್ ಕಾಪರ್‌ವೈರ್ ಕಳುವಾಗಿದೆ ಎಂದು ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಅವರ ವರದಿಯಲ್ಲಿ ಹೇಳಿದ್ದಾರೆ. ಇದನ್ನೆಲ್ಲಾ ಏಕೆ ಹೇಳುತ್ತೇನೆ ಎಂದರೆ ಮುಖ್ಯ ಮಂತ್ರಿಗಳು ತಮ್ಮ ಎರ್ಲಾ ಕೆಲಸದ ಜೊತೆಗೆ ಈ ಎರೆಕ್ಟ್ರಿಸಿಟಿ ಬೋರ್ಡಿನ ಕೆಲಸವನ್ನೂ ನೋಡಿಕೊಳ್ಳಬೇಕು ಅವರಿಗೆ ಇರತಕ್ಕ ಮಲ್ಟಿಫೇರಿಯಸ್ ಎಂಗೇಜ್‌ಮೆಂಟ್ಸಿನಲ್ಲಿ ಈ ಕಡೆಗೆ ಹೆಚ್ಚಿನ ಅದ್ಯತೆ ಕೊಡಲಾರರು ಎಂದು ನನಗೆ ಅನಿಸುತ್ತದೆ. ಏಕೆಂದರೆ ಸಾಲ ಮಾಡುವುದಕ್ಕೆ ಹೊರಟಿದ್ದಾರೆ, ಸಾಲ ಕೊಡಬೇಕೆಂದು ಹೊರಟಾಗ ಸೆಂಟ್ರಲ್ ಲ್ಯಾಂಡ್ ಮಾರ್ಟಗೇಜ್ ಬ್ಯಾಂಕಿನವರು ಲ್ಯಾಂಡ್ ಇಂಪ್ರೂವ್‌ಮೆಂಟ್ ಲೋನ್‌ಬೇಕೆಂದು ಒಂದು ಕೋಟಿ ರೂಪಾಯಿ ಕೇಳಿದಾಗ 65 ಲಕ್ಷ ರೂಪಾಯಿ ಮಾತ್ರ ಬಂತು ಮತ್ತೆ ಮೂರು ದಿನ ಟೈಂ ಎಕ್ಸ್‌ಟೆಂಡ್ ಮಾಡಿದರು ಎರಡು ಬ್ಯಾಂಕುಗಳವರು ಮುಖ್ಯ ಮಂತ್ರಿಗಳವರ ಮಾತಿಗೆ ಕಟ್ಟುಬಿದ್ದು 20 ಲಕ್ಷ ರೂಪಾಯಿ ಕೊಡುತ್ತೇವೆ ಎಂದು ಮಾತು ಕೊಟ್ಟು 15 ಲಕ್ಷ ರೂಪಾಯಿಗಳನ್ನು ಕೊಟ್ಟು ಪಂಜಾಬಿಗೆ ಹೋದರು. ಇಂತಹ ಗಹನವಾದ ವಿಚಾರದಮೇರೆ ನ್ಯಾಲ ಗಮನ ಕೊಡಬೇಕಾದ್ದು ನರು ಎಂದು ಕಾಣುತ್ತಾ ಇದೆ. ಒಟ್ಟಿನಲ್ಲಿ ಹೇಳುವುದಾದರೆ ಇವತ್ತಿನ ದಿವಸ ಎರೆಕ್ಟ್ರಿಸಿಟಿ ಬೋರ್ಡು ಜನತೆಯ ಮನಸ್ಸಿಗೆ ತೃಪ್ತಿಕರವಾದ ರೀತಿಯಲ್ಲಿ ಕೆಲಸ ಮಾಡುತ್ತಾ ಇಲ್ಲ ಆದ್ದರಿಂದ ಈ ಬೋರ್ಡನ್ನು ರೀಕಾನ್ಸ್‌ಟ್ಟ್ಯೂಟ್ ಮಾಡಿ ದಕ್ಷತೆಯಿಂದ ಕೆಲಸ ಮಾಡುವವರನ್ನು ಅಲ್ಲಿ ಇಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎನ್. ನಿಜಲಿಂಗಪ್ಪ.- ಸ್ವಾಮಿ, ಕೇಳಿರತಕ್ಕ ಈ ಕೋರಿಕೆಗೆ ವಿರುದ್ಧವಾಗಿಯೂ ಮತ್ತು ಪರವಾಗಿಯೂ ಕೆಲವು ಜನ ಮಾತನಾಡಿದ್ದಾರೆ. ವಿದ್ಯುಚ್ಛಕ್ತಿಯನ್ನು ಎರ್ಲಾ ಕಡೆಯಲ್ಲೂ ಕೊಡಬೇಕು ಆದ್ದರಿಂದ ಅದಕ್ಕೆ ಖರ್ಚಾಗತಕ್ಕದ್ದು ಅವಶ್ಯಕ ಎನ್ನುವ ಬಗ್ಗೆ ಎಲ್ಲೂ ಏನೂ ಅನುಮಾನ ಕಾಣಲಿಲ್ಲ. ಇದು ಅವಶ್ಯಕವಾಗಿ ಬೇಕಾಗಿರತಕ್ಕದ್ದು. ಆದರೆ ಎರ್ಲಾ ಕಡೆಯಲ್ಲೂ ಸಾಕಾದಷ್ಟು ವಿದ್ಯುಚ್ಛಕ್ತಿಯನ್ನು ಕೊಡುತ್ತಾ ಇಲ್ಲ ಎಂಬುದು ಒಂದು ಅಂಶ, ಅದಕ್ಕೆ ಕಾರಣ ಇದ್ದದ್ದು ಸಾಕಾದಷ್ಟು ಉತ್ಪತ್ತಿ ಆಗುತ್ತಾ ಇರಲಿಲ್ಲ. ಅದರಿಂದಾಗಿ ಹೆಚ್ಚು ಎಲ್ಲ ಕಡೆಗೂ ಕೊಡುವುದಕ್ಕೆ ಸಾಧ್ಯವಾಗಿಲ್ಲ ಇನ್ನು ಮುಂದೆ ಹಳ್ಳಿಗಳಿಗೆ ಕೊಡಬೇಕೆಂದು ಮಾಡಿದ್ದೇವೆ, ಕೊಡುತ್ತೇವೆ. ಪಂಪ್‌ಗಳಿಗೆ ಕೊಡುತ್ತೇವೆ ಮತ್ತು ಬೇರೆ ಕಾರ್ಖಾನೆಗಳು ವಗೈರೆ ಇದ್ದರೆ ಅವುಗಳಿಗೂ ಕೂಡ ಕೊಡುತ್ತೇವೆ. ಹಾಗೆ ಜಾಸ್ತಿಯಾಗಿ ಕೊಡಬೇಕು, ಜಾಸ್ತಿ ಉತ್ಪನ್ನವಾಗುತ್ತದೆ ಎಂಬ ದೃಷ್ಟಿಯಿಂದಲೇ ಈ ಕೋರಿಕೆ ಬಂದಿರತಕ್ಕದ್ದು. ಶ್ರೀಮಾನ್ ಗೋಪಾಲಗೌಡರನ್ನು ನಾನು ಅವರು ಚಿಕ್ಕ ಹುಡುಗರಾಗಿದ್ದಾಗಿನಿಂದಲೂ ನೋಡಿದ್ದೇನೆ, ಮಾನ್ಯ ಸದಸ್ಯರ ವಿಚಾರದಲ್ಲಿ ನನಗೆ ಬಹಳ ಪ್ರೀತಿ ಇದೆ. ಭಾಷೆ ಚೆನ್ನಾಗಿ ಮಾತನಾಡುತ್ತಾರೆ, ಭಾಷೆ ಚೆನ್ನಾಗಿದೆ ವಿಚಾರಗಳು ನೆಲ ಬಿಟ್ಟು ಆಕಾಶದಲ್ಲಿ ಇರುತ್ತವೆ. ಭಾಷೆ ಕಡೆಗೆ ಮತ್ತು ಹೇಳತಕ್ಕ ಮಾತುಗಳ ಶಬ್ದಗಳ ಕಡೆಗೆ ಅವರ ವಿಚಾರ

(ಶ್ರೀ ಎಸ್. ನಿಜಲಿಂಗಪ್ಪ)

ಇರುತ್ತದೆಯೇ ಹೊರತು ನಿಜವಾದ ವಿಚಾರಗಳ ಕಡೆಗೆ ಅವರ ಗಮನ ಇರುವುದಿಲ್ಲ. ಆದ್ದರಿಂದ ವಿಚಾರಗಳ ಕಡೆಗೆ ಅವರ ಗಮನ ಹೆಚ್ಚಾಗಿರಲಿ ಎಂದು ಹೇಳಿ ನಾನು ಅಪೇಕ್ಷೆ ಮಾಡುತ್ತೇನೆ, ಅವರ ಹಿತದೃಷ್ಟಿಯಿಂದ ಶ್ರೀಮಾನ್ ಐಕಳ ಅವರು ಮಾತನಾಡಿದ್ದಾರೆ, ತಪ್ಪು ಮಾತನಾಡಿದರೋ ಅಥವಾ ತಿಳಿಯದೇ ಮಾತನಾಡಿದರೋ ಗೊತ್ತಿಲ್ಲ, ಬಹಳ ಸಿಟ್ಟಾಗಿ ಮಾತನಾಡಿದ್ದಾರೆ. ನಣ್ಣ ಕೈಗಾರಿಕೆಗಳು ಜಾಸ್ತಿಯಾಗಿ ಬೆಳೆಯಬೇಕೆಂಬುದೇ ಸರ್ಕಾರದ ಉದ್ದೇಶ. ಯಾರಾದರೂ ಹೊರಗಿನವರು ಬಂದು ಇಲ್ಲಿ ನಣ್ಣ ಕೈಗಾರಿಕೆಗಳನ್ನು ಹಾಗೂ ದೊಡ್ಡ ಕೈಗಾರಿಕೆಗಳನ್ನು ಪ್ರಾರಂಭ ಮಾಡುತ್ತೇವೆ ಎಂದರೆ ಎಲ್ಲಾ ಕೈಗಾರಿಕೆಗಳಿಗೂ ಸರ್ಕಾರ ಉತ್ತೇಜನ ಕೊಡುತ್ತದೆ. ಅವರಿಗೆ ಪಾಪ ತೊಂದರೆ ಯಾಗಿರಬಹುದು ಅದಕ್ಕೆ ಸಿಟ್ಟಾಗಿದ್ದಾರೆ.

ಆಡಳಿತ ಚೆನ್ನಾಗಿಲ್ಲ ಎಂದು ಹೇಳುವುದಕ್ಕೆ ಕೆಲವು ಆಡಿಟ್ ಆಗಿಲ್ಲ ಎಂದು ಹೇಳಿದ್ದಾರೆ. ವಿಚಾರ ಮಾಡಿದ್ದರಲ್ಲಿ 57-58ರ ಅಕೌಂಟ್ಸ್ ಫೈನಲ್ ಆಗಿ ಕೆಲವು ಮಾಹಿತಿಗಳನ್ನು ಕೇಳಿದ್ದಾರೆ ಅದನ್ನು ಆಡಿಟರ್ ಜನರಲ್ ಅವರಿಗೆ ಕಳುಹಿಸಿದ್ದೇವೆ. ಆದ್ದರಿಂದ ಇಷ್ಟರಲ್ಲೇ ಫೈನಲೈಸ್ ಆಗುವುದು ಇದೆ. 62-63ರವರೆಗೂ ಅಕೌಂಟ್ಸ್ ತಯಾರಾಗಿದೆ ಇನ್‌ಕಂಟ್ಯಾಕ್ಸ್ ರಿಟರ್ನ್ ಕೊಟ್ಟಿದ್ದಾರೆ ಅದೂ ಕೂಡ ಇಷ್ಟರಲ್ಲೇ ಫೈನಲೈಸ್ ಆಗುತ್ತದೆ. 63-64ರ ಬಡ್ಜೆಟ್ ಬಂದಾಗ ಬಡ್ಜೆಟ್ ವಿಷಯ ಸಾಕಾದಷ್ಟು ಮಾತನಾಡಿದ್ದಾರೆ, ಜವಾಬು ಕೊಟ್ಟಿದ್ದೇನೆ. ಬ್ಯಾಂಕಿನಲ್ಲಿ ಒಂದೇ ಸಲ ಇವತ್ತು 10 ಸಾವಿರ ರೂಪಾಯಿ ಬೇಕು, ನಾಳೆ 50 ಸಾವಿರ ರೂಪಾಯಿ ಬೇಕು ಎಂದು ಹೋದರೆ ಯಾರೂ ಕೊಡುವುದಿಲ್ಲ ಮತ್ತು ಅದು ವ್ಯವಹಾರವೂ ಅಲ್ಲ. ಅವರಿಗೆ ಹೇಳಿದ್ದೇನೆ, ಯಾವಾಗಲೂ ಸಾಲ ಮಾಡತಕ್ಕ ಮನುಷ್ಯ ವ್ಯವಹಾರದಲ್ಲಿ ಏನು ಮಾಡುತ್ತಾನೆ? 6 ತಿಂಗಳಿಗೊಮ್ಮೆ 3 ತಿಂಗಳಿಗೊಮ್ಮೆ ಸಾಲ ಕೇಳುವುದಕ್ಕೆ ಹೋದರೆ ಅವನನ್ನು ಹುಚ್ಚ ಎನ್ನುತ್ತಾರೆ, ಆದ್ದರಿ ದ ತನಗೆ ಎಷ್ಟು ಬೇಕೋ ಅದನ್ನು ವಿಚಾರ ಮಾಡಿ ವರ್ಷ 6 ತಿಂಗಳಿಗೆ ಎಷ್ಟು ಬೇಕಾಗುತ್ತದೆ, ಎಷ್ಟು ಖರ್ಚು ಎಷ್ಟು ಆದಾಯ ಬರುತ್ತದೆ ಎಷ್ಟು ಸಾಲ ಬೇಕಾಗುತ್ತದೆ ಎಂಬುದನ್ನು ಲೆಕ್ಕಾಚಾರ ಮಾಡಿ ಅಷ್ಟು ಹಣವನ್ನು ತೆಗೆದುಕೊಂಡು ಮತ್ತೆ ಆ ಹಣವನ್ನು ಅದೇ ಬ್ಯಾಂಕಿನಲ್ಲಿ ಇಡುತ್ತಾನೆ. ಆ ರೀತಿ ಸಾಲ ತೆಗೆದುಕೊಂಡು ಹಣವನ್ನು ಬ್ಯಾಂಕಿನಲ್ಲಿ ಇಡದಿದ್ದರೆ, ದೊಡ್ಡ ವ್ಯವಹಾರಗಳನ್ನು ಮಾಡುವಾಗ ಹಣ ಬೇಕು ಎಂದು ಕೇಳಿದಾಗ ಕೊಡುವುದಕ್ಕಾಗುವುದಿಲ್ಲ ಎಂದರೆ ಲಕ್ಷಾನಾಗುತ್ತದೆ. ಆ ರೀತಿ ಲುಕ್ಷಾನಾಗುವುದು ಸ್ವಾಭಾವಿಕ. ಆ ರೀತಿ ತೆಗೆದುಕೊಂಡ ಹಣವನ್ನು ಬ್ಯಾಂಕಿನಲ್ಲಿ ಇಟ್ಟಿದ್ದಾರೆ ಅದರಿಂದ ತೊಂದರೆ ಏನೂ ಆಗಿಲ್ಲ. ವ್ಯವಹಾರದಲ್ಲಿ ಲೋಪದೋಷಗಳಿದ್ದರೆ ಪರಿಶೀಲಸೋಣ ಲೆಕ್ಕಪತ್ರಗಳು ಪ್ರತಿ ವರ್ಷ ಕಾನೂನು ಪ್ರಕಾರ ಆಡಿಟ್ ಆಗುತ್ತಿವೆ, ತಮ್ಮ ಮುಂದೆ ಅವುಗಳನ್ನಿಟ್ಟು ಒಪ್ಪಿಗೆ ಪಡೆಯುತ್ತೇವೆ. ವಿದ್ಯುಚ್ಛಕ್ತಿ ಅರೇಳು ತಿಂಗಳಲ್ಲಿ ಹೆಚ್ಚಾಗಿ ಉತ್ಪತ್ತಿಯಾಗುವುದರಿಂದ ಹೆಚ್ಚು ಹಣ ಬೇಕಾಗುತ್ತದೆ. ಎಲ್ಲ ಕಡೆಗೂ ಜಾಗ್ರತೆ ವಿದ್ಯುಚ್ಛಕ್ತಿಯನ್ನೊದಗಿಸಲು ಕೆಲವು ಅಡಚಣೆಗಳಿವೆ, ಹೊರಗಿನಿಂದ ಕೆಲವು ಸಾಮಾನುಗಳು ಬರಬೇಕಾಗುತ್ತದೆ, ತಂತಿ ಸಿಕ್ಕುವುದಿಲ್ಲ, ಇದಕ್ಕೆಲ್ಲಾ ಬೇಕಾದ ಏರ್ಪಾಡು ಮಾಡಬೇಕಾಗುತ್ತದೆ. ಈ ದೃಷ್ಟಿಯಿಂದ ಕೇಳಿರುವುದು ಸಾಧುವಾಗಿದೆ, ಮಾನ್ಯ ಸದಸ್ಯರು ಒಪ್ಪಿಕೊಳ್ಳಬೇಕೆಂದು ಅರಿಕೆಮಾಡುತ್ತೇನೆ.

ಶ್ರೀ ಕೆ. ದೇವಯ್ಯ (ಮುಲ್ಲೇಶ್ವರಂ).—ಬೆಂಗಳೂರು ನಗರದಲ್ಲಿ ಮನೆಗಳಮೇಲೆ ಓವರ್‌ಹೆಡ್ ಲೈನ್ ಇದೆ. ಪರಮನಂಟಾಗಿ ಅಂಡರ್‌ಗ್ರೌಂಡ್ ಕೇಬಲ್ ಹಾಕಿ ಓವರ್ ಹೆಡ್ ಲೈನನ್ನು ತೆಗೆದು ಹಾಕಲು ಏರ್ಪಾಡುಮಾಡುತ್ತೀರಾ?

ಶ್ರೀ ಎಸ್. ನಿಜಲಿಂಗಪ್ಪ.—ಈಗ ಆ ಕೆಲಸ ನಡೆಯುತ್ತಿದೆ, ಆದಷ್ಟು ಜಾಗ್ರತೆ ಮಾಡರಾಗುತ್ತದೆ.

ಶ್ರೀ ಎಸ್. ಗೋಪಾಲಗೌಡ.—ನಾವು ಮಾಡಿದ ಟೀಕೆಗೆ ಸಮಂಜಸವಾದ ಉತ್ತರ ಬರಲಿಲ್ಲ.

Mr. SPEAKER.—The Hon'ble Member wants me to know that there are a few minutes left over before the time fixed expires. He must know that we cannot treat it like that. I will put the motion to the vote of the House :

The question is :

"That whereas the Government of Mysore proposes to fix the maximum amount which the Mysore State Electricity Board

may, at any time, have on loan under sub-section (1) of Section 65 of the Electricity (Supply) Act, 1948 (Central Act 54 of 1948) at twenty crores of rupees;

And whereas under sub-section (3) of Section 65 of the said Act, approval of the State Legislative Assembly is required for fixing a higher maximum amount than ten crores of rupees;

Now, therefore, the State Legislative Assembly hereby accords approval to the proposal of the State Government to fix under sub-section (3) of Section 65 of the said Act, twenty crores of rupees as the maximum amount which the Board may at any time have on loan under sub-section (1) of Section 65 of the said Act."

The resolution was adopted.

HYDERABAD ABOLITION OF INAMS (MYSORE AMENDMENT) BILL, 1964.

Motion to consider.

Sri M. V. KRISHNAPPA (Minister for Revenue).—I move:

"That the Hyderabad Abolition of Inams (Mysore Amendment) Bill, 1964 be taken into consideration."

Mr. SPEAKER.—Motion moved:

"That the Hyderabad Abolition of Inams (Mysore Amendment) Bill, 1964 be taken into consideration."

Sri M. V. KRISHNAPPA.—Sir, this is a very simple amendment to the existing Act. In the Mysore Inams Act there is provision for payment of compensation in bonds in equal instalments with accrued interest. Such a provision was not there in the Hyderabad Inams Abolition Act. So we want to introduce it: By introducing this amedment there will be no further financial implication. This enables us to pay compensation in instalments.

Sri C. J. MUCKANNAPPA.—What about the proposed land reform? What is your intention and when are you going to implement the land reforms in the State?

Sri M. V. KRISHNAPPA.—That Act has practically nothing to do with this Bill. If you permit me, Sir, I may say that only last week the Chief Minister and myself had a discussion with the Planning Commission. We have two difficulties and we intend to bring two amendments to the Act before this House and by the end of this year we hope to enforce the Land Reforms Act.

Mr. SPEAKER.—The question is:

"That the Hyderabad Abolition of Inams (Mysore Amendment) Bill, 1964 be taken into consideration."

The motion was adopted.